**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ269/2011** **ಪಿ.ಡಬ್ಲೂಃ 02**

ಸಾಕ್ಷಿಯನ್ನು ಇಂದು ದಿನಾಂಕಃ **12.08.2022** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟಿ ಸವಾಲುಃ 1** ಮತ್ತು **7** ಎ ನೇ ಪ್ರತಿವಾದಿ ಪರ ಶ್ರೀ **ಬಿ.ಎಂ.ಎನ್** ವಕೀಲರಿಂದಃ

ಈ ದಾವೆಯಲ್ಲಿ ಎಷ್ಟು ಆಸ್ತಿಗಳಿಗೆ ಸಂಬಂಧಿಸಿದಂತೆ ದಾವೆ ಹಾಕಿರುತ್ತಾರೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಗಳ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ನನ್ನ ತಾಯಿ ರಾಚಮ್ಮರವರು **1996** ರಲ್ಲಿ ತೀರಿಕೊಂಡಿರುತ್ತಾರೆ.

ಚಿಕ್ಕಸಿದ್ದಯ್ಯರವರು ಕುಟುಂಬಕ್ಕೆ ಗೋಪಾಲಪುರದ ಪುರಸಭೆಯ ವ್ಯಾಪ್ತಿಯಲ್ಲಿರುವ ಮನೆಯ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ತಿ.ನರಸೀಪುರದ ಯಾವ ಜಾಗದಲ್ಲಿ ಜಮೀನು ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಗೋಪಾಲಪುರದಲ್ಲಿ ಇರುತ್ತದೆ. ಸದರಿ ಜಮೀನಿನ ಸರ್ವೇ ನಂಬರ ಹಾಗೂ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಮಲಿಯೂರು ಗ್ರಾಮದಲ್ಲಿರುವ **2** ಎಕರೆ ಜಮೀನಿನ ಸರ್ವೇ ನಂಬರ ಹಾಗೂ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಸದರಿ ಜಮೀನಿನ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ಚಿಕ್ಕಸಿದ್ದಯ್ಯ ಮತ್ತು ಅವರ ಗಂಡ ಮಕ್ಕಳು ತಮ್ಮ ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ಮಾಡಿಕೊಂಡಿರುವ ದಾಖಲೆಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ವಾದಿಯು ಮದುವೆಯಾಗಿ ಸುಮಾರು **25-35** ವರ್ಷಗಳಾಗಿರುತ್ತದೆ. ನನಗೆ ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಹಾಗೂ ವಾದಿಯ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಲಿಯೂರು ಗ್ರಾಮದ ಜಮೀನುಗಳು ಚಿಕ್ಕಸಿದ್ದಯ್ಯರವರು ತಮ್ಮ ಜೀವಿತಾವಧಿಯಲ್ಲಿ ಮಾರಾಟ ಮಾಡಿರುವ ವಿಷಯ ನನಗೆ ಗೊತ್ತಿರುವುದಿಲ್ಲ.

**ಪಾಟಿ ಸವಾಲುಃ 5** ನೇ ಪ್ರತಿವಾದಿ ಪರ ಶ್ರೀ **ಎಂ.ಡಿ** ವಕೀಲರಿಂದಃ

ಚಿಕ್ಕಸಿದ್ದಯ್ಯರವರು ತೀರಿಕೊಂಡ ನಂತರ ಅವರ ಮಕ್ಕಳು ಬೇರೆ ಬೇರೆಯಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಚಿಕ್ಕಸಿದ್ದಯ್ಯರವರು **2002** ರಲ್ಲಿ ತೀರಿಕೊಂಡಿರುತ್ತಾರೆ.

ಸದರಿಯವರ ಮಕ್ಕಳು ವಿಭಾಗ ಮಾಡಿಕೊಂಡು ಖಾತಾ ವರ್ಗಾವಣೆ ಮಾಡಿಕೊಂಡು ಪ್ರತ್ಯೇಕವಾಗಿ ಇರುತ್ತಾರೆ ಎಂದರೆ ಸರಿ.

ನನಗೆ ಸಾಕ್ಷಿ ಹೇಳಲು ವಾದಿಯು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಸಂಗತಿಗಳನ್ನು ವಾದಿಯು ಹೇಳಿ ಬರೆಸಿರುತ್ತಾರೆ ಎಂದರೆ ಸಾಕ್ಷಿಯು ನಾನು ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ** ಉಳಿದ ಪ್ರತಿವಾದಿಗಳು ಹಾಗೂ ಅವರ ವಕೀಲರು ಗೈರು ಹಾಜರಾಗಿದ್ದು, ಅವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲಃ

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಲಯ ತಿ.ನರಸೀಪುರ.**